International Journal of Kannada Research
www.kannadajournal.com

ISSN: 2454–5813
IJSR 2016; 2(3): 97-100
© 2016 IJKS
www.kannadajournal.com
Received: 16-04-2016
Accepted: 17-05-2016

**ಡಾ. ಡಿ.ಜೆ ಶಶಿಕುಮಾರ್**
*ಉಪನ್ಯಾಸಕರು ಮತ್ತು ಪೋಸ್ಟ್‌ಡಾಕ್ಟರಾಲ್ ಫೆಲೋ (ಯು.ಜಿ.ಸಿ) ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.*

**Correspondence**
**ಡಾ. ಡಿ.ಜೆ ಶಶಿಕುಮಾರ್**
*ಉಪನ್ಯಾಸಕರು ಮತ್ತು ಪೋಸ್ಟ್‌ಡಾಕ್ಟರಾಲ್ ಫೆಲೋ (ಯು.ಜಿ.ಸಿ) ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣಾಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.*
ಕರ್ನಾಟಕ ವಿಶ್ವವಿದ್ಯಾಲಯ.

# ಡಾ. ಅಂಬೇಡ್ಕರ್ ಪರಿಕಲ್ಪನೆಯಲ್ಲಿ ಒಕ್ಕೂಟ ಸರ್ಕಾರ

**ಡಾ. ಡಿ.ಜೆ ಶಶಿಕುಮಾರ್**

ವಿಶ್ವದ ಶ್ರೇಷ್ಠ ರಾಜಕೀಯ ಚಿಂತಕರಲ್ಲಿ ಭಾರತದ ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಕೂಡ ಒಬ್ಬರು. ಭಾರತದಲ್ಲಿ ಒಕ್ಕೂಟ ಸರ್ಕಾರವನ್ನು ಸ್ಥಾಪಿಸುವ ಮೂಲಕ ಬಲಿಷ್ಠ ಕೇಂದ್ರ ಸರ್ಕಾರಕ್ಕೆ ಭದ್ರಬುನಾದಿಯನ್ನು ನಿರ್ಮಿಸಿಕೊಟ್ಟರು. ಸಂವಿಧಾನ ಕುರಿತ ಇವರ ದೂರದೃಷ್ಟಿಯ ಚಿಂತನೆಗಳು ಭಾರತ ದೇಶದ ಏಕ್ಯತೆ ಮತ್ತು ರಾಜಕೀಯವನ್ನು ಗಟ್ಟಿಗೊಳಿಸುತ್ತವೆ. ಡಾ. ಅಂಬೇಡ್ಕರ್‌ರವರು ಒಕ್ಕೂಟ ಸರ್ಕಾರವನ್ನು ಕುರಿತು ಸೂಚಿಸಿದ ಮಾರ್ಗಗಳು ಇಂದಿನ ಕೇಂದ್ರ–ರಾಜ್ಯಗಳ ಸಂಬಂಧಗಳಲ್ಲಿರುವ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುತ್ತವೆ.
ಭಾರತವು ಪ್ರಾಂತ್ಯ, ಭಾಷೆ, ಧರ್ಮ ಮತ್ತು ಜಾತಿಗಳೆಂಬ ವೈರುಧ್ಯಗಳನ್ನು ಹೊಂದಿರುವ ರಾಷ್ಟ್ರವಾಗಿದೆ. ಈ ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಲು ಒಕ್ಕೂಟ ವ್ಯವಸ್ಥೆ ಅವಶ್ಯಕ ಮತ್ತು ಅನಿವಾರ್ಯ ಎಂದು ಅಂಬೇಡ್ಕರ್ ಮನಗಂಡಿದ್ದರು. ಆದ್ದರಿಂದ ಒಕ್ಕೂಟ ವ್ಯವಸ್ಥೆಯೊಳಗೆ ಬಲಿಷ್ಠ ಕೇಂದ್ರ ಸರ್ಕಾರವನ್ನು ಸ್ಥಾಪಿಸಲು ಅವರು ಮಾಡಿರುವ ಪ್ರಯತ್ನ ಶ್ಲಾಘನಾರ್ಹವಾದದ್ದು. ಅಂಬೇಡ್ಕರ್ ಪರಿಕಲ್ಪನೆಯ ಒಕ್ಕೂಟ ಸರ್ಕಾರವು ಅಮೆರಿಕಾ, ಕೆನಡಾ ಮತ್ತು ಆಸ್ಟ್ರೇಲಿಯಾ ಸಂಯುಕ್ತ ಸರ್ಕಾರಗಳಿಗಿಂತ ಮತ್ತು ಇಂಗ್ಲೆಂಡ್‌ನ ಏಕಾತ್ಮಕ ಸರ್ಕಾರ ವ್ಯವಸ್ಥೆಗಿಂತ ಹೇಗೆ ಭಿನ್ನವಾಗಿದೆ ಮತ್ತು ಶ್ರೇಷ್ಠವಾಗಿದೆ ಎಂಬುದನ್ನು ತೌಲನಾತ್ಮಕವಾಗಿ ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.
ನೆಹರು ಸಮಿತಿ ವರದಿ (1928) ಯ ಭಾರತದ ಸಂವಿಧಾನವು ಸಂಯುಕ್ತ ಮಾದರಿಯಾಗಿರಬೇಕು ಮತ್ತು ಪ್ರಾಂತ್ಯಗಳು ಒಕ್ಕೂಟಕ್ಕೆ ಸೇರುವುದನ್ನು ಸ್ವಾಗತಿಸುತ್ತದೆ ಎಂದು ಶಿಫಾರಸ್ಸು ಮಾಡಿತು. ಮುಂದೆ ಮಹಮ್ಮದ್ ಆಲಿ ಜಿನ್ನಾ ಅವರ 14 ಅಂಶಗಳ ವರದಿಯಲ್ಲಿ ನೆಹರು ಸಮಿತಿಯ ಕುರಿತು ಹಲವಾರು ಭಿನ್ನಾಭಿಪ್ರಾಯಗಳಿದ್ದಾಗ್ಯೂ ಕೂಡ ಸಂಯುಕ್ತ ವ್ಯವಸ್ಥೆಯ ಸ್ಥಾಪನೆಗೆ ಬೆಂಬಲ ನೀಡಿದರು. ಮುಂದೆ ಡಾ.ಅಂಬೇಡ್ಕರ್ ಅವರು ಸೈಮನ್ ಆಯೋಗಕ್ಕೆ ನೀಡಿದ ಸಾಕ್ಷ್ಯದಲ್ಲಿ ಭಾರತದ ಸಂವಿಧಾನವು ಸಂಯುಕ್ತ ಮಾದರಿ ಆಗಿರಬೇಕು ಎಂದು ಒತ್ತಾಯಿಸಿದರು. ಇದನ್ನು ಮಾನ್ಯ ಮಾಡಿದ ಸೈಮನ್ ಆಯೋಗವು ತನ್ನ ವರದಿಯಲ್ಲಿ ಭವಿಷ್ಯದ ಭಾರತ ಸಂವಿಧಾನ ಕಡ್ಡಾಯವಾಗಿ ಸಂಯುಕ್ತ ಮಾದರಿಯದ್ದೇ ಆಗಿರಬೇಕು ಎಂದು ತಿಳಿಸಿತು. ಡಾ. ಅಂಬೇಡ್ಕರ್ ಅವರು 1930 ರಿಂದ 32ರ ವರೆಗೆ ನಡೆದ ದುಂಡು ಮೇಜಿನ ಸಮ್ಮೇಳನಗಳಲ್ಲಿ ಭಾರತಕ್ಕೆ ಸಂಯುಕ್ತ ಮಾದರಿಯ ವ್ಯವಸ್ಥೆಯನ್ನು ಸ್ಥಾಪಿಸಬೇಕೆಂದು ಬಲವಾಗಿ ಪ್ರತಿಪಾದಿಸಿದರು. ಇದರ ಫಲವಾಗಿ 1935 ರ ಭಾರತ ಸರ್ಕಾರ ಕಾಯಿದೆಯು ಸಂಯುಕ್ತ ಸರ್ಕಾರ ವ್ಯವಸ್ಥೆಯ ಸ್ಥಾಪನೆಗೆ ಅಡಿಪಾಯ ಹಾಕಿತು. ಮುಂದೆ ನೆಹರುರವರು ಡಿಸೆಂಬರ್ 13, 1946 ರಂದು ಸಂವಿಧಾನದ ಧ್ಯೇಯೋದ್ದೇಶಗಳನ್ನು ಸಂವಿಧಾನದ ರಚನಾ ಸಭೆಯಲ್ಲಿ ಮಂಡಿಸಿದರು. ಅದು ಜನವರಿ 22, 1947 ರಂದು ಸಭೆಯಲ್ಲಿ ಅನುಮೋದಿಸಿಲ್ಪಟ್ಟಿತು. ನಮ್ಮ ಸಂವಿಧಾನದ ಆ ಧ್ಯೇಯೋದ್ದೇಶಗಳಲ್ಲಿ ಸಂಯುಕ್ತ ಸರ್ಕಾರದ ಸ್ಥಾಪನೆಯು ಒಂದಾಗಿತ್ತು. ಅಂಬೇಡ್ಕರ್ ಅವರು ಸಂಯುಕ್ತ ಸರ್ಕಾರದ ದೋಷಗಳನ್ನು ತಮ್ಮ ಅಧ್ಯಯನ ಹಾಗೂ ಸಂಶೋಧನೆ ಮೂಲಕ ಗ್ರಹಿಸಿದ್ದರಿಂದ ಹಲವಾರು ವೈರುಧ್ಯಗಳಿರುವ ಭಾರತಕ್ಕೆ ಸಂಯುಕ್ತ ಸರ್ಕಾರ ಸರಿಹೊಂದುವುದಿಲ್ಲ ಎಂದು ಮನಗಂಡಿದ್ದರು. ಆದ್ದರಿಂದ ಸಂಯುಕ್ತ ಸರ್ಕಾರ ಪದ ಬಳಕೆಗೆ ಸಂವಿಧಾನದ ರಚನಾ ಸಭೆಯ ಸದಸ್ಯರಾದ ಡಾ.ಅಂಬೇಡ್ಕರ್, ಕೆ.ಎಂ.ಮುನ್ಷಿ ಮತ್ತು ಹೆಚ್. ವಿ. ಕಾಮತ್‌ರವರ ವಿರೋಧವಿತ್ತು. ವಿಶೇಷವಾಗಿ ಡಾ.ಅಂಬೇಡ್ಕರ್‌ರವರು ಸಂಯುಕ್ತ ಎಂಬ ಪದ ಬಳಕೆಯನ್ನು ವಿರೋಧಿಸಲು ನೀಡುವ ಕಾರಣಗಳೆಂದರೆ

1) ಸಂಯುಕ್ತ ಸರ್ಕಾರ ವ್ಯವಸ್ಥೆಯ ದೋಷಗಳನ್ನು (Rigidity and Ligalism) ಅರಿತಿದ್ದರು.
2) ಭಾರತದ ಪರಿಸ್ಥಿತಿಗೆ ಪೂರ್ಣ ಸಂಯುಕ್ತ ಸರ್ಕಾರ ಹೊಂದಾಣಿಕೆ ಆಗುವುದಿಲ್ಲ.

ಅಂಬೇಡ್ಕರ್‌ರವರು ಫೆಬ್ರವರಿ 21, 1947 ರಂದು ಸಂವಿಧಾನ ರಚನಾ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಮೇಲಿನ ದೋಷಗಳನ್ನು ಸಮರ್ಥಿಸಿಕೊಂಡರು. ಮುಂದೆ ನವೆಂಬರ್ 4, 1948 ರಂದು ಸಂವಿಧಾನದ ಕರಡನ್ನು ಮಂಡಿಸಿದ ಸಂದರ್ಭದಲ್ಲಿ ಎರಡು ಬಹಳ ಮುಖ್ಯವಾದ ಪ್ರಶ್ನೆಗಳನ್ನು ಎತ್ತುತ್ತಾರೆ. ಮೊದಲನೆಯದು ಯಾವ ಮಾದರಿಯ ಸರ್ಕಾರಕ್ಕೆ ಸಂವಿಧಾನ ಅವಕಾಶ ಮಾಡಿಕೊಟ್ಟಿದೆ, ಎರಡನೆಯದಾಗಿ ಯಾವ ಮಾದರಿಯ ಸಂವಿಧಾನವಿದೆ. ಈ ಎರಡು ಪ್ರಮುಖ ವಿಷಯಗಳು ವಿಶ್ವದ ಪ್ರತಿಯೊಂದು ಸಂವಿಧಾನದಲ್ಲಿರುತ್ತವೆ. ಮೊದಲನೆಯ ಪ್ರಶ್ನೆಗೆ ಅಂಬೇಡ್ಕರ್ ಅವರು ನೀಡುವ ವಿಶ್ಲೇಷಣೆಯು ಅಧ್ಯಕ್ಷೀಯ ಮಾದರಿಯ ಸರ್ಕಾರಕ್ಕೂ ಮತ್ತು ಸಂಸದೀಯ ಮಾದರಿಯ ಸರ್ಕಾರಕ್ಕೂ ಇರುವ ವ್ಯತ್ಯಾಸಗಳನ್ನು ವಿವರಿಸುತ್ತಾರೆ. ಹಾಗೆಯೇ ಭಾರತ ಸಂವಿಧಾನವು ಅಧ್ಯಕ್ಷೀಯ ಮಾದರಿಯ ಸರ್ಕಾರಕ್ಕೆ ಹೆಸರುವಾಸಿಯಾದ ಅಮೇರಿಕಾಕ್ಕಿಂತ ಮತ್ತು ಸಂಸದೀಯ ಸರ್ಕಾರಕ್ಕೆ ಪ್ರಸಿದ್ಧಿಯಾದ ಇಂಗ್ಲೇಂಡ್‌ಗಿಂತ ಹೇಗೆ ಭಿನ್ನವಾಗಿದೆ ಎಂಬುದನ್ನು ವಿವರಿಸಿದರು. ಮುಂದೆ ಅವರು ಎರಡನೇ ಪ್ರಶ್ನೆಯಾದ ಸಂವಿಧಾನಕ್ಕೆ ಸಂಬಂಧಿಸಿದಂತೆ ಮಾತನಾಡುತ್ತಾ ವಿಶ್ವದಲ್ಲಿ ಎರಡು ಪ್ರಮುಖ ಸಂವಿಧಾನಗಳಿವೆ. ಒಂದು ಏಕಾತ್ಮಕ ಸಂವಿಧಾನ ಎರಡನೆಯದು ಸಂಯುಕ್ತ ಸಂವಿಧಾನ. ಈ ಎರಡು ಸಂವಿಧಾನಗಳ ಬಹಳ ಮುಖ್ಯ ಲಕ್ಷಣಗಳೆಂದರೆ ಏಕಾತ್ಮಕ ಸಂವಿಧಾನದಲ್ಲಿ 1) ಕೇಂದ್ರ ಸರ್ಕಾದ ಅಧಿಪತ್ಯ 2) ಪ್ರಾಂತ್ಯೋಯ ಸರ್ಕಾರಗಳು ಗೌಣವಾಗಿರುತ್ತವೆ. ಸಂಯುಕ್ತ ಸಂವಿಧಾನದಲ್ಲಿ 1) ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಸ್ತಿತ್ವದಲ್ಲಿರುತ್ತವೆ. 2) ರಾಜ್ಯ ಸರ್ಕಾರಗಳು ಪರಮಾಧಿಕಾರವನ್ನು ಹೊಂದಿರುತ್ತವೆ.

ಅಂಬೇಡ್ಕರ್ ಪ್ರಕಾರ ಫೆಡರೇಷನ್ ಎಂದರೆ Establishment of dual Polity ಸಂಯುಕ್ತ ಸರ್ಕಾರದಲ್ಲಿ ರಾಜ್ಯಗಳು ಆಡಳಿತಾತ್ಮಕ ಘಟಕಗಳಾಗಿತ್ತವೆ ಅಥವಾ ಏಜೆನ್ಸಿಗಳಾಗಿತ್ತವೆ ಆದರೆ ಭಾರತದಲ್ಲಿ ರಾಜ್ಯಗಳು ಆಳಿತಾತ್ಮಕ ಘಟಕಗಳಾಗಿಯೂ ಇರುವುದಿಲ್ಲ ಅಥವಾ ಏಜೆನ್ಸಿಗಳಾಗಿಯೂ ಇರುವುದಿಲ್ಲ ಎಂದು ತಿಳಿಸಿದರು. ಮುಂದೆ ಅವರು ಸಂಯುಕ್ತ ಸರ್ಕಾರ ವ್ಯವಸ್ಥೆಯು ವಿಶ್ವಕ್ಕೆ ಒಂದು ಮಾದರಿಯಾಗಿದ್ದು ಅದು ಹಲವಾರು ನ್ಯೂನ್ಯತೆಗಳಿಂದ ಕೂಡಿದೆ. ಆದರೆ ಭಾರತದ ಒಕ್ಕೂಟ ವ್ಯವಸ್ಥೆಯು ಅಮೇರಿಕಕ್ಕಿಂತ ಭಿನ್ನವಾಗಿರುವುದಕ್ಕೆ ಅಂಬೇಡ್ಕರ್‌ರವರು ನೀಡಿರುವ ಕಾರಣಗಳನ್ನು ಕೆಳಕಂಡಂತೆ ಚರ್ಚಿಸಲಾಗಿದೆ.

1) **ಪೌರತ್ವ:** ಅಮೇರಿಕಾ ಪ್ರಜೆಗಳಿಗೆ ದೇಶಕ್ಕೆ ಒಂದು ಪೌರತ್ವ ಹಾಗೂ ರಾಜ್ಯಕ್ಕೆ ಒಂದು ಪೌರತ್ವ ಎಂಬ ದ್ವಿಪೌರತ್ವಕ್ಕೆ ಆ ಸಂವಿಧಾನ ಅವಕಾಶ ನೀಡಿದೆ. ಆದರೆ ಭಾರತ ತನ್ನ ಪ್ರಜೆಗಳಿಗೆ ದೇಶದ ಪೌರತ್ವ (ಏಕ ಪೌರತ್ವ)ವನ್ನು ಮಾತ್ರ ನೀಡುವ ಮೂಲಕ ದೇಶದ ಐಕ್ಯತೆಗೆ ನಮ್ಮ ಸಂವಿಧಾನ ಅವಕಾಶ ಕಲ್ಪಿಸಿದೆ.
2) **ಸಂವಿಧಾನ:** ಅಮೇರಿಕಾದಲ್ಲಿ ಎರಡು ರೀತಿಯ ಸಂವಿಧಾನವು ಅಸ್ತಿತ್ವದಲ್ಲಿದ್ದು ಫೆಡರಲ್ ಸಂವಿಧಾನ ಮತ್ತು ಆಯಾ ರಾಜ್ಯಗಳಿಗೆ ಸಂಬಂಧಿಸಿದ ಸಂವಿಧಾನ ಜಾರಿಯಲ್ಲಿದೆ. ಫೆಡರಲ್ ಸಂವಿಧಾನದ ತಿದ್ದುಪಡಿಗೆ ಅತ್ಯಂತ ಕಠಿಣ ಮಾರ್ಗಗಳನ್ನು ಅನುಸರಿಸಿ ತಿದ್ದುಪಡಿ ಮಾಡಲಾಗುತ್ತದೆ. ಆದರೆ ಭಾರತದ ಸಂವಿಧಾನವು ಅಖಂಡ ಭಾರತಕ್ಕೆ ಏಕೈಕ ಸಂವಿಧಾನವಾಗಿದೆ. ಹಾಗೂ ನಮ್ಮ ಸಂವಿಧಾನವನ್ನು ತಿದ್ದುಪಡಿ ಮಾಡಲು ಸುಲಭ ಮತ್ತು ಕಠಿಣ ಮಾರ್ಗಗಳನ್ನು ಅನುಸರಿಸಲಾಗುತ್ತದೆ.
3) 'Federation means the establishment of dual Polity' ಆದ್ದರಿಂದ ಅಮೇರಿಕ ದ್ವಿ ಸರ್ಕಾರಕ್ಕೆ ಅವಕಾಶ ನೀಡಿದೆ. ಕೇಂದ್ರದಲ್ಲಿ ಫೆಡರಲ್ ಸರ್ಕಾರ ಮತ್ತು ರಾಜ್ಯಗಳಲ್ಲಿ ರಾಜ್ಯ ಸರ್ಕಾರ ಅಸ್ತಿತ್ವದಲ್ಲಿದೆ. ಫೆಡರಲ್ ಸರ್ಕಾರದಲ್ಲಿ ರಾಜ್ಯಗಳು ಒಂದು ಒಕ್ಕೂಟ ಅಥವಾ ಆಡಳಿತ ಘಟಕಗಳು ಅಥವಾ ಏಜೆನ್ಸಿಗಳಾಗಿವೆ. ಹಾಗಾಗಿ ಅಂಬೇಡ್ಕರ್‌ರವರು ಫೆಡರಲ್ ಮತ್ತು ಯೂನಿಯನ್ ಪದಗಳ ನಡುವಿನ ವ್ಯತ್ಯಾಸ ಗುರುತಿಸಿ ಭಾರತದ ಸಂವಿಧಾನದ ಒಂದನೇ ವಿಧಿಯಲ್ಲಿ "ಭಾರತ ಎಂಬುದು ರಾಜ್ಯಗಳ ಒಂದು ಒಕ್ಕೂಟ" ಎಂದು ಸಂವಿಧಾನದಲ್ಲಿ ಸೇರಿಸಿದ ಕೀರ್ತಿ ಡಾ. ಅಂಬೇಡ್ಕರ್‌ರವರಿಗೆ ಸಲ್ಲುತ್ತದೆ. ಭಾರತದ ಸಂವಿಧಾನದಲ್ಲಿಯೂ ಸಹ ಕೇಂದ್ರ ಮತ್ತು ರಾಜ್ಯದಲ್ಲಿ ಒಂದೊಂದು ಸರ್ಕಾರ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದೆ. ಆದರೆ ಅಧಿಕಾರದ ಹಿನ್ನೆಲೆಯಲ್ಲಿ ಪ್ರಬಲ ಕೇಂದ್ರ ಸರ್ಕಾರ ಮತ್ತು ದುರ್ಬಲ ರಾಜ್ಯ ಸರ್ಕಾರಗಳನ್ನು ಸ್ಥಾಪಿಸಲಾಗಿದೆ.
4) ಡಾ. ಅಂಬೇಡ್ಕರ್‌ರವರು ಅಮೇರಿಕಾದ ಸಂಯುಕ್ತ ಸರ್ಕಾರ ಏಕಾತ್ಮಕ ಸರ್ಕಾರವಾಗಿ ಕಾರ್ಯನಿರ್ವಹಿಸಲು ಎಂದಿಗೂ ಸಾಧ್ಯವಿಲ್ಲವೆಂದು ಹೇಳಿದರು. ಆದರೆ "ನಮ್ಮ ಒಕ್ಕೂಟ ವ್ಯವಸ್ಥೆಯು ಶಾಂತಿಯ ಕಾಲದಲ್ಲಿ ಸಂಯುಕ್ತ ಸರ್ಕಾರವಾಗಿ ಯುದ್ಧದ ಸಂದರ್ಭದಲ್ಲಿ ಏಕಾತ್ಮಕ ಸರ್ಕಾರವಾಗಿ ದೇಶದ ಸಾರ್ವಭೌಮ ಅಧಿಕಾರವನ್ನು ಕಾಪಾಡುತ್ತದೆ". ಆದ್ದರಿಂದ ಪ್ರಪಂಚದ ಯಾವುದೇ ಸಂಯುಕ್ತ ಸರ್ಕಾರ ವ್ಯವಸ್ಥೆಗಳು ಹೊಂದಿರದ ವಿಶಿಷ್ಟ ಗುಣ-ಲಕ್ಷಣಗಳನ್ನು ನಮ್ಮ ಒಕ್ಕೂಟ ವ್ಯವಸ್ಥೆ ಹೊಂದಿದೆ.

ಆಸ್ಟ್ರೇಲಿಯಾದ ಸಂವಿಧಾನಗಿಂತಲೂ ಭಾರತ ಒಕ್ಕೂಟ ಸಂವಿಧಾನ ಹೇಗೆ ಭಿನ್ನ ಮತ್ತು ಶ್ರೇಷ್ಠ ಎಂಬುದನ್ನು ಕೂಡ ಅಂಬೇಡ್ಕರ್‌ರವರು ವಿವರಿಸಿದ್ದಾರೆ. ಅದನ್ನು ಈ ಕೆಳಕಂಡಂತೆ ವಿಶ್ಲೇಷಿಸಿಲಾಗಿದೆ.

1) ಆಸ್ಟ್ರೇಲಿಯಾದ ಸಂಸತ್ತು 3 ವಿಷಯಗಳ ಮೂಲಕ ದೇಶಕ್ಕೆ ಅನ್ವಯವಾಗುವ ಕಾನೂನುಗಳ ರಚನೆಯನ್ನು ಹೊಂದಿದೆ. ಆದರೆ ಭಾರತದ ಸಂವಿಧಾನ 97 ವಿಷಯಗಳ ಮೇಲೆ ಕಾನೂನು ರಚಿಸುವ ಸಾರ್ವಭೌಮ ಅಧಿಕಾರ ಹೊಂದಿದೆ.
2) ಆಸ್ಟ್ರೇಲಿಯಾದ ಸಂಸತ್ತಿಗೆ ಸಮವರ್ತಿ ಪಟ್ಟಿಯ 39 ವಿಷಯಗಳ ಮೇಲೆ ಕಾನೂನು ರಚನಾ ಅಧಿಕಾರವಿದೆ. ಆದರೆ ನಮ್ಮ ಸಂವಿಧಾನದಲ್ಲಿ 47 ವಿಷಯಗಳ ಮೇಲೆ ಕಾನೂನು ರಚನಾ ಅಧಿಕಾರ ಸಂಸತ್ತಿಗಿದೆ.
3) ಸಂವಿಧಾನದ 249 ನೇ ವಿಧಿಯ ಅನ್ವಯ ರಾಜ್ಯ ಪಟ್ಟಿಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ರಾಷ್ಟ್ರದ ಹಿತದೃಷ್ಟಿಯಿಂದ ಕಾನೂನು ರಚಿಸುವ ಅಧಿಕಾರ ಸಂಸತ್ತಿಗೆ ಇದೆ.
4) ತುರ್ತು ಪರಿಸ್ಥಿತಿ ಜಾರಿಯಲ್ಲಿದ್ದಾಗ ಸಂವಿಧಾನದ 250ನೇ ವಿಧಿಯ ಪ್ರಕಾರ ರಾಜ್ಯ ಪಟ್ಟಿಯಲ್ಲಿರುವ ಎಲ್ಲಾ ವಿಷಯಗಳ ಮೇಲೆ ಕಾನೂನು ರಚಿಸುವ ಅಧಿಕಾರ ಸಂಸತ್ತಿಗಿದೆ.
5) ಸಂವಿಧಾನದ 252ನೇ ವಿಧಿ ಅನುಸಾರ ಎರಡು ಅಥವಾ ಅದಕ್ಕಿಂತ ಹೆಚ್ಚು ರಾಜ್ಯಗಳ ಸಮ್ಮತಿಯಿಂದ ಆ ರಾಜ್ಯಗಳಿಗಾಗಿ ಕಾನೂನು ರಚಿಸುವ ಅಧಿಕಾರ ಸಂಸತ್ತಿಗಿದೆ. ಈ ವಿಷಯದಲ್ಲಿ ಮಾತ್ರ ಆಸ್ಟ್ರೇಲಿಯಾ ಮತ್ತು ಭಾರತದ ಸಂವಿಧಾನದಲ್ಲಿ ಸಾಮ್ಯತೆ ಕಂಡುಬರುತ್ತದೆ. ಆದರೆ ಮೇಲಿನ ಎರಡು ವಿಧಿಗಳು ವಿಶೇಷವಾಗಿ ಭಾರತದಲ್ಲಿದೆ.

ನಮ್ಮ ಒಕ್ಕೂಟ ಸಂವಿಧಾನವು ಅಮೇರಿಕಾ, ಆಸ್ಟ್ರೇಲಿಯಾ ಮತ್ತು ಕೆನಡಾ ದೇಶಗಳ ಸಂಯುಕ್ತ ಸರ್ಕಾರಗಳಿಗಿಂತ ಹೇಗೆ ಬಲಿಷ್ಠ ಮತ್ತು ಉತ್ಕೃಷ್ಟ ಎಂಬುದನ್ನು ಸಹ ಅಂಬೇಡ್ಕರ್ ಕೆಳಕಂಡ ವಿವರಣೆಗಳ ಮೂಲಕ ನಿರೂಪಿಸಿದ್ದಾರೆ. ಅವುಗಳಲ್ಲಿ ಬಹಳ ಮುಖ್ಯವಾದ ಅಂಶಗಳನ್ನು ಚರ್ಚಿಸಲಾಗಿದೆ.

1) **ಏಕ ನ್ಯಾಯಾಂಗ ವ್ಯವಸ್ಥೆ:** ದೇಶದಲ್ಲಿ ಏಕ ಮಾದರಿಯ ನ್ಯಾಯಾಂಗ ವ್ಯವಸ್ಥೆಯು ಅಸ್ತಿತ್ವದಲ್ಲಿದೆ. ಮೇಲ್ಮಟ್ಟದಲ್ಲಿ ಸುಪ್ರೀಂಕೋರ್ಟ್ ಸಂವಿಧಾನ ಮತ್ತು ಮೂಲಭೂತ ಹಕ್ಕುಗಳ ರಕ್ಷಕನಂತೆ ಕೆಲಸ ಮಾಡುತ್ತದೆ. ಜೊತೆಗೆ ಕೇಂದ್ರ–ರಾಜ್ಯಗಳ ಅಧಿಕಾರ ಹಂಚಿಕೆಗಳ ವ್ಯಾಜ್ಯಗಳನ್ನು ಬಗೆಹರಿಸುವ ಮೂಲಕ ಒಕ್ಕೂಟ ವ್ಯವಸ್ಥೆಯನ್ನು ರಕ್ಷಿಸುತ್ತದೆ.
2) **ಮೂಲಭೂತ ಹಕ್ಕು, ಸಿವಿಲ್ ಮತ್ತು ಕ್ರಿಮಿನಲ್ ಕಾನೂನು:** ದೇಶದ ಎಲ್ಲಾ ಪ್ರಜೆಗಳಿಗೂ ಏಕ ರೂಪದ ಮೂಲಭೂತ ಹಕ್ಕುಗಳನ್ನು ಸಂವಿಧಾನವು ನೀಡಿದೆ. ಹಾಗೆಯೇ ಸಿವಿಲ್ ಮತ್ತು ಕ್ರಿಮಿನಲ್ ಕಾನೂನುಗಳಾದ ಉದಾ:- (Civil Procedure, penal code, Criminal procedure code, Evidence code, ಮುಂತಾದವು ದೇಶದ ಎಲ್ಲೆಡೆ ಏಕ ಮಾದರಿಯಲ್ಲಿವೆ.
3) **ಅಖಿಲ ಭಾರತ ಸೇವೆ:** ಅಖಿಲ ಭಾರತ ಸೇವೆಗಳಾದ ಖಂಖ, ಖಈಖ, ಖಓಖ, ಮುಂತಾದವುಗಳಿಗೆ ಸಾಮಾನ್ಯ ಅರ್ಹತೆ ಮತ್ತು ಸಮಾನ ವೇತನವನ್ನು ನಿಗದಿಪಡಿಸಲಾಗಿದೆ. ಕೇಂದ್ರದ ಆಶೋತ್ತರಗಳನ್ನು ಜಾರಿಗೆ ತರಲು ಮತ್ತು ಆಡಳಿತ ದೃಷ್ಟಿಯಿಂದ ರಾಜ್ಯಗಳ ಮೇಲೆ ಹಿಡಿತ ಸಾಧಿಸಿ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸಲು ಈ ಸೇವೆಗಳನ್ನು ಬಳಸಿಕೊಳ್ಳಲಾಗಿದೆ.
4) **ತುರ್ತುಪರಿಸ್ಥಿತಿ:** ಸಂವಿಧಾನದ 352ನೇ ವಿಧಿಯ ಪ್ರಕಾರ ದೇಶ ಯುದ್ಧ ಅಥವಾ ಬಾಹ್ಯ ಆಕ್ರಮಣ ಅಥವಾ ಸ್ವಶಸ್ತ್ರ ದಂಗೆಯಿಂದ ಗಂಭೀರ ಪರಿಸ್ಥಿತಿ ಉಂಟಾದರೆ ರಾಷ್ಟ್ರಪತಿಗಳು 'ರಾಷ್ಟ್ರಿಯ ತುರ್ತುಪರಿಸ್ಥಿತಿ' ಘೋಷಿಸಬಹುದು. 356ನೇ ವಿಧಿಯ ಅನುಸಾರ ರಾಜ್ಯಗಳಲ್ಲಿ ಸಂವಿಧಾನತ್ಮಕ ವ್ಯವಸ್ಥೆ ವಿಫಲವಾದ ಸಂದರ್ಭದಲ್ಲಿ 'ರಾಜ್ಯ ತುರ್ತುಪರಿಸ್ಥಿತಿ'ಯನ್ನು ರಾಷ್ಟ್ರಪತಿ ಘೋಷಿಸಬಹುದು. 360ನೇ ವಿಧಿ ಅನ್ವಯ ದೇಶದ ಹಣಕಾಸಿನ ಸ್ಥಿರತೆಗೆ ದಕ್ಕೆ ಉಂಟಾದರೆ 'ಹಣಕಾಸಿನ ತುರ್ತುಪರಿಸ್ಥಿತಿ'ಯನ್ನು ರಾಷ್ಟ್ರಾಧ್ಯಕ್ಷರು ಘೋಷಿಸಬಹುದು.

**ಉಪಸಂಹಾರ:**

ವಿಶ್ವದ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದ ಸಂವಿಧಾನವು 65 ವರ್ಷಗಳ ಕಾಲ ಯಶಸ್ವಿಯ ಹಾದಿಯಲ್ಲಿ ನಡೆಯಲು ಮತ್ತು ಒಕ್ಕೂಟ ವ್ಯವಸ್ಥೆ ಬಲಿಷ್ಠವಾಗಿರಲು ಡಾ. ಅಂಬೇಡ್ಕರ್‌ರವರ ದೂರದೃಷ್ಟಿಯ ಚಿಂತನೆಗಳು ಕಾರಣವಾಗಿವೆ. ಅವರು ಅಧ್ಯಕ್ಷೀಯ ಮಾದರಿಯ ಸರ್ಕಾರದಲ್ಲಿ ಕಾರ್ಯಾಂಗ ಮತ್ತು ಶಾಸಂಗದ ಅಧಿಕಾರಗಳು ಪ್ರತ್ಯೇಕವಾಗಿರುತ್ತವೆ. ಅಧ್ಯಕ್ಷೀಯ ಮಾದಿಯಲ್ಲಿ ಅಧ್ಯಕ್ಷ ಮತ್ತು ಆತನ ಕಾರ್ಯದರ್ಶಿಗಳು ಶಾಸಕಾಂಗದ ಸದಸ್ಯರಾಗಿರುವುದಿಲ್ಲ. ಯಾವುದೇ ಪ್ರಜಾಪ್ರಭುತ್ವ ಕಾರ್ಯಾಂಗವು ಬಹಳ ಮುಖ್ಯವಾಗಿ ಈ ಎರಡು ನಿಯಮಗಳನ್ನು ಈಡೇರಿಸಲೇಬೇಕು ಮೊಸಲನೆಯದು ಸ್ಥಿರ ಕಾರ್ಯಾಂಗವಾಗಿರಬೇಕು ಎರಡನೆಯದು ಜವಾಬ್ದಾರಿ ಕಾರ್ಯಾಂಗವಾಗಿರಬೇಕು ಆದರೆ ಅಧ್ಯಕ್ಷೀಯ ಮಾದರಿಯ ಸರ್ಕಾರಗಳಾದ ಅಮೇರಿಕ ಮತ್ತು ಸ್ವಿಟ್ಜರ್ಲ್ಯಾಂಡ್ ಸರ್ಕಾರಗಳು ಹೆಚ್ಚು ಸ್ಥಿರ ಕಾರ್ಯಾಂಗಗಳಾಗಿವೆ ಆದರೆ ಕಾರ್ಯಾಂಗಕ್ಕೆ ಹೊಣೆಗಾರಿಕೆ ಕಡಿಮೆ ಇದೆ. ಅದೇ ಏಕಾತ್ಮಕ ಸರ್ಕಾರಕ್ಕೆ ಮಾದರಿಯಾದ ಇಂಗ್ಲೆಂಡ್ ಸಂಸದೀಯ ಸರ್ಕಾರದಲ್ಲಿ ಕಾರ್ಯಾಂಗಕ್ಕೆ ಹೆಚ್ಚು ಹೊಣೆಗಾರಿಕೆ ಇದೆ ಆದರೆ ಸ್ಥಿರತೆ ಕಡಿಮೆಯಿದೆ ಆದ್ದರಿಂದ ಭಾರತದ ಸಂಸದೀಯ ಸರ್ಕಾರ ವ್ಯವಸ್ಥೆಯು ಅಮೆರಿಕಾದ ಅಧ್ಯಕ್ಷೀಯ ಸರ್ಕಾರಕ್ಕಿಂತ ಹೆಚ್ಚು ಸ್ಥಿರವಾಗಿದೆ ಮತ್ತು ಇಂಗ್ಲೇಂಡ್‌ನ ಸಂಸದೀಯ ಸರ್ಕಾರಕ್ಕಿಂತ ಹೆಚ್ಚು ಹೊಣೆಗಾರಿಕೆಯಿಂದ ಕೂಡಿದೆ. ಆದ್ದರಿಂದ ಡಾ. ಅಂಬೇಡ್ಕರ್ ರೂಪಿಸಿದ ಭಾರತದ ಸಂಸದೀಯ ಸರ್ಕಾರವು ವಿಶ್ವದಲ್ಲೇ ಅತ್ಯಂತ ವಿಶೇಷವಾದ ಗುಣವನ್ನು ಹೊಂದಿದೆ.

ಒಕ್ಕೂಟ ವ್ಯವಸ್ಥೆಯಲ್ಲಿ ಬಲಿಷ್ಠ ಕೇಂದ್ರ ಸರ್ಕಾರದ ಸ್ಥಾಪನೆ ಅವರ ಸದುದ್ದೇಶವಾಗಿತ್ತು. ಆದರೆ ಅವರ ಪರಿಕಲ್ಪನೆಯ ಒಕ್ಕೂಟ ವ್ಯವಸ್ಥೆಗೆ ಭಾಷಾವಾರು ರಾಜ್ಯಗಳ ರಚನೆಯು ಒಂದು ಸವಾಲಾಗಿ ಪರಿಣಮಿಸಿತ್ತು. ಆದ್ದರಿಂದ ಅಂಬೇಡ್ಕರ್‌ರವರು ಅಖಂಡ ಭಾರತದ ಐಕ್ಯತೆ ಮತ್ತು ಅಭಿವೃದ್ಧಿ ಹಿತದೃಷ್ಟಿಯಿಂದ ಭಾಷಾವಾರು ರಾಜ್ಯಗಳಿಗೆ ಪರ್ಯಾಯವಾಗಿ ಚಿಕ್ಕ–ಚಿಕ್ಕ ರಾಜ್ಯಗಳ ರಚನೆಯನ್ನು ಬಯಸಿದರು. ಭಾರತದ ರಾಜ್ಯಗಳು ಪ್ರಾದೇಶಿಕವಾಗಿ ದೊಡ್ಡ ಮತ್ತು ಚಿಕ್ಕ ರಾಜ್ಯಗಳಾಗಿ ರಚನೆಗೊಂಡಿವೆ. ಆದ್ದರಿಂದ ರಾಜ್ಯಗಳ ಸಮಾನ ಅಭಿವೃದ್ಧಿ ಸಾಧ್ಯವಾಗಿಲ್ಲ. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷಗಳು ಸಮಾನ ರಾಷ್ಟ್ರೀಯ ಅಭಿವೃದ್ಧಿ ಧೋರಣೆಯನ್ನು ಹೊಂದಿಲ್ಲದಿರುವುದು ಒಂದು ಪ್ರಬಲ ಕಾರಣವಾಗಿದೆ. ಆದ್ದರಿಂದ ಅಂಬೇಡ್ಕರ್ ಸೂಚಿಸಿದ ರಾಷ್ಟ್ರೀಯತೆಯನ್ನು ಆಳುವ ವರ್ಗ ಅನುಸರಿಸಿದ್ದೇಯಾಗಿದ್ದರೆ ದೇಶದ ಸಮಾನ ಅಭಿವೃದ್ಧಿ ಸಾಧ್ಯವಾಗುತ್ತಿತ್ತು. ಸಂವಿಧಾನದ 356ನೇ ವಿಧಿಯನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಸರ್ಕಾರಗಳು ಅಧಿಕರವನ್ನು ದುರ್ಬಳಕೆ ಮಾಡಿಕೊಂಡು ರಾಜ್ಯಗಳ ಮೇಲೆ ನಿಯಂತ್ರಣ ಸಾಧಿಸುತ್ತಿವೆ. ಅವರು ಸಂವಿಧಾನ ರಚನಾ ಸಭೆಯಲ್ಲಿ ಈ ವಿಧಿಯನ್ನು ರಾಜ್ಯಗಳ 'ಮರಣ ಶಾಸನ'ವೆಂದು ಟೀಕಿಸಿದ್ದರು. ಅದು ಇಂದು ಸತ್ಯವಾಗಿದೆ. ಇನ್ನಾದರೂ ಕೇಂದ್ರ ಸರ್ಕಾರ ಅಂಬೇಡ್ಕರ್‌ರವರು ಈ ವಿಧಿ ಕುರಿತು ನೀಡಿದ ಸಲಹೆಯಾದ 'ಕೊನೆಯ ಅಸ್ತ್ರ'ವಾಗಿ ಮಾತ್ರ ಬಳಸಿಕೊಳ್ಳಬೇಕು.

ಆಧುನಿಕ ಭಾರತದ ರಾಜಕೀಯವು ಸಮ್ಮಿಶ್ರ ಸರ್ಕಾರದ ಕಡೆ ಹೆಚ್ಚು ಒಲವನ್ನು ಹೊಂದಿರುವುದರಿಂದ ಕೆಲವು ಸಂದರ್ಭದಲ್ಲಿ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗುತ್ತಿದೆ. ಕೇಂದ್ರ–ರಾಜ್ಯ ಸರ್ಕಾರಗಳು ಸ್ವಹಿತಾ ಸಾಧನೆಗೆ ಒಕ್ಕೂಟ ವ್ಯವಸ್ಥೆಯನ್ನು ಬುಡಮೇಲು ಮಾಡುವ ಪ್ರಸಂಗಗಳು ನಡೆಯುತ್ತಿದೆ. ಆದ್ದರಿಂದ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾದರೆ ದೇಶಕ್ಕೆ ಒಳಿತಾಗುವುದಿಲ್ಲ ಎಂಬುದನ್ನು ರಾಷ್ಟ್ರೀಯ ಹಾಗೂ ಪ್ರಾದೇಶಿಕ ರಾಜಕೀಯ ಪಕ್ಷಗಳು ಮನಗಾಣಬೇಕಿದೆ. ಅಖಿಲ ಭಾರತ ಸೇವೆಯಲ್ಲಿರುವರು ಪ್ರಾಂತೀಯ, ಭಾಷೆ, ಧರ್ಮ ಮತ್ತು ಜಾತಿಗಳನ್ನು ಮೀರಿದ ರಾಷ್ಟ್ರೀಯ ಧೋರಣೆಗಳನ್ನು ಹೊಂದಬೇಕಿದೆ. ಆ ಮೂಲಕ ಕೇಂದ್ರ ಮತ್ತು ರಾಜ್ಯಗಳಲ್ಲಿ ಅಧಿಕಾರಕ್ಕೆ ಬರುವ ಸರ್ಕಾರಗಳಿಂದ ದೇಶದ ಐಕ್ಯತೆಯನ್ನು ಸಾಧಿಸುವ ಹಾಗೂ ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ಕೆಲಸ ಹೆಚ್ಚು–ಹೆಚ್ಚು ಆಗಬೇಕಿದೆ. ಇದನ್ನು ಸಾಧಿಸಲು ಅಂಬೇಡ್ಕರ್‌ರವರು ಹೇಳಿದ **"ಭಾರತೀಯನೇ ಮೊದಲು, ಭಾರತೀಯನೇ ಕೊನೆ, ಭಾರತೀಯನಲ್ಲದೆ ಏನೇನು ಅಲ್ಲ"** ಎಂಬುದನ್ನು ಪ್ರತಿಯೊಬ್ಬ ಭಾರತೀಯನು ಅನುಸರಿಸಬೇಕಿದೆ.

ಅಂಬೇಡ್ಕರ್ ಅವರು ಸಂವಿಧಾನವನ್ನು ಕುರಿತು ನೀಡಿದ ಎಚ್ಚರಿಕೆಯೆಂದರೆ "ನಮ್ಮ ಸಂವಿಧಾನ ಅತ್ಯುತ್ತಮವಾಗಿದ್ದು, ಶಾಂತಿಯ ಕಾಲದಲ್ಲಿ ಸಂಯುಕ್ತ ಸರ್ಕಾರವಾಗಿ, ಯುದ್ಧದ ಸಂದರ್ಭದಲ್ಲಿ ಏಕಾತ್ಮಕ ಸರ್ಕಾರವಾಗಿ ಕಾರ್ಯವನ್ನು ನಿರ್ವಹಿಸುತ್ತದೆ" ಈ ರೀತಿಯ ವಿಶೇಷವಾದ ಗುಣ ವಿಶ್ವದ ಯಾವುದೇ ಸಂವಿಧಾನದಲ್ಲಿ ಕಂಡುಬರುವುದಿಲ್ಲ. ಆದಾಗ್ಯೂ ಕೂಡ

"ನಮ್ಮ ಸಂವಿಧಾನ ವೈಫಲ್ಯ ಹೊಂದಿದರೆ ಸಂವಿಧಾನ ಕಾರಣವಲ್ಲ, ಅದಕ್ಕೆ ಮನುಷ್ಯನ ವಿಕೃತವೇ ಕಾರಣ" ಎಂದಿದ್ದಾರೆ.

## Reference


1) Constituent Assembly Debates Official Report Lokasabha Secretariat govt of India, 1947; 5:293-296.
2) Dr BabashabAmbedkar writings and Speeches Ministry of Social Justice and Empowerment, govt of India, 2014.
3) Kuber WN. Ambedkar A Critical Study People publishing house NewDelhi-1991.
4) The constitution of Indian Lokasabha Secretariat Government of India, 2001.
5) VishnooBhagawan, Vidya Bhushan World Constitutions AComporative Study sterling Publishers pvt Limited Re-2011.
6) Dr. Durga Das Basu Introduction to the Constitution of India (20$^{th}$ed) Lixis Nexes Butterworthswadhawa Nagpur, NewDelhi-2009.